10ನೇ ತರಗತಿಯಲ್ಲಿ ತೇರ್ಗಡೆಯಾಗಿತ್ತಿರುವ ವಿದ್ಯಾರ್ಥಿಗಳು

42 (29)

ಶ್ರೀ ನರೇಂದ್ರ ಬಾಬು ನೆ.ಲ.(ಮಹಾಲಕ್ಷ್ಮೀ ಲೇಔಟ್)

ಅ) ಕಳೆದ ಎರಡು ವರ್ಷಗಳಿಂದ 10ನೇ ತರಗತಿಯಲ್ಲಿ ತೇರ್ಗಡೆ–ಯಾಗಿತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಈ ವಿದ್ಯಾರ್ಥಿಗಳಿಗೆ ಉತ್ತಮ ಭವಿಷ್ಯ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಆ) ಸರ್ಕಾರಿ ಪ.ಪೂ.ಕಾಲೇಜುಗಳಲ್ಲಿ ಸೀಮಿತ ಅವಕಾಶಗಳು ಮಾತ್ರವೇ ಇರುವುದರಿಂದ, ವಿದ್ಯಾರ್ಥಿಗಳು ಶೇಕಡ 50 ರಿಂದ 65% ಅಂಕಗಳನ್ನು ಪಡೆದವರಿಗೆ ಪ್ರವೇಶಾವಕಾಶಗಳಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದರೂ ಸಹ ಪ್ರವೇಶಾವಕಾಶ ಹೆಚ್ಚಿಸದೆ ಇರಲು ಕಾರಣವೇನು?

ಇ) ಈ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಂಡಿದ್ದಲ್ಲಿ ವಿವರ ನೀಡುವುದು?

ಈ) ಬೆಂಗಳೂರು ನಗರದಲ್ಲಿ ಹೊಸದಾಗಿ ಪ.ಪೂ.ಕಾಲೇಜುಗಳನ್ನು ಆರಂಭಿಸಲು ತೀರ್ಮಾನ ಕೈಗೊಳ್ಳಲಾಗಿದೆಯೇ; ಹಾಗಿದ್ದರೆ, ಯಾವ ಯಾವ ಬಡಾವಣೆಗಳಲ್ಲಿ ನೂತನ ಕಾಲೇಜುಗಳು ಅಸ್ತಿತ್ವಕ್ಕೆ ಬರಲಿವೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ
(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಅಗತ್ಯವಿರುವೆಡೆಗಳಲ್ಲಿ/ ಪ್ರವೇಶ ದಾಖಲಾತಿ ಹೆಚ್ಚಿದಂತೆ ದಾಖಲಾತಿಗಳಿಗೆ ಅವಕಾಶ ಕಲ್ಪಿಸಿಕೊಡಲು ನಿಯಾಮಾನುಸಾರ ಕ್ರಮಕೈಗೊ–ಳ್ಳಲಾಗುವುದು.

ಆ) ಪ್ರಥಮ ಪಿ.ಯು.ಸಿ.ಗೆ ದಾಖಲಾಗಲು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಯಾವುದೇ ಮಾಧ್ಯಮ, ವಿಭಾಗ, ಸಂಯೋಜನೆಗೆ ನಿರ್ದಿಷ್ಟ ಅಂಕಗಳನ್ನು ನಿಗಧಿಪಡಿಸಿರುವುದಿಲ್ಲ. ಹಾಗೂ ಕಾಲೇಜುಗಳಿಗೆ ದಾಖಲಾಗಲು ವಿದ್ಯಾರ್ಥಿಗಳ ಸಂಖ್ಯೆಗೆ ಮಿತಿ ಇರುವುದಿಲ್ಲ.

ಇ) ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಹಾಲಿ ಲಭ್ಯವಿರುವ ಮೂಲಭೂತ ಸೌಕರ್ಯಗಳಿಗೆ ಅನುಗುಣವಾಗಿ ಗರಿಷ್ಠ ಮಟ್ಟದಲ್ಲಿ ದಾಖಲಾತಿ–ಗಳನ್ನು ಮಾಡಿಕೊಳ್ಳಲಾಗುತ್ತಿದೆ.

ಈ) ಸ್ಥಳೀಯ ಅಗತ್ಯತೆಯನ್ನು ಪರಿಗಣಿಸಿ ಅನುದಾನದ ಲಭ್ಯತೆಯ–ನ್ನಾಧರಿಸಿ ಮಂಜೂರು ಮಾಡಲು ಕ್ರಮವಹಿಸಲಾಗುವುದು.